Reg. No. | | | | | | | | | |

**BBAKAL 154/BBMKAL 154**

## II Semester B.B.A./B.B.M. Degree Examination, April/May 2019

*(Credit Based Semester Scheme)*

*(2017-18 Batch onwards)*

**ಕನ್ನಡ**

**ಕನ್ನಡ ಭಾಷೆ**

Shri Dharmasthala Manjunatheshwara College of Business Management Library MANGALORE - 575 003

Time : 3 Hours] [Max. Marks : 80

I. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ : **(3 × 8 = 24)**

1. ಸಮಾನತೆ, ಮಾನವೀಯತೆಗಳ ಆಶಯವು 'ದಹನದ ಕಥೆ' ಕವಿತೆಯಲ್ಲಿ ಹೇಗೆ ವ್ಯಕ್ತವಾಗಿದೆ? ವಿವರಿಸಿರಿ.

ಅಥವಾ

ಕನಕದಾಸರು ತಮ್ಮ ಕೀರ್ತನೆಯಲ್ಲಿ ಮೌಢ್ಯ, ಕಂದಾಚಾರಗಳನ್ನು ವಿಡಂಬಿಸಿದ ಬಗೆಯನ್ನು ವಿವರಿಸಿರಿ.

2. ತನ್ನ ಕರ್ತೃತ್ವ ಬಲದಿಂದಲೇ ಸಾಧನೆಗೈದ ಪೂನಂ ಶ್ರೋತ್ರಿಯವರ ಜೀವನದ ಯಶೋಗಾಥೆಯನ್ನು ವಿವರಿಸಿರಿ.

ಅಥವಾ

ಮನುಷ್ಯನ ಜೀವನದಲ್ಲಿ 'ಆಗಂತುಕ' ಸೃಷ್ಟಿಸುವ ಭಯ ಮತ್ತು ಏರಿಳಿತಗಳನ್ನು ಆಲನ ಹಳ್ಳಿಯವರ ಕಥೆಯ ಹಿನ್ನಲೆಯಲ್ಲಿ ವಿಶ್ಲೇಷಿಸಿರಿ.

3. ಆಧುನಿಕ ಶಿಕ್ಷಣ ಪದ್ಧತಿಯು ಸೃಜಿಸುತ್ತಿರುವ ಸಂವೇದನಾ ಶೂನ್ಯ ಬುದ್ಧಿವಂತರ ಮನೋಧರ್ಮವನ್ನು 'ಟೊಳ್ಳು-ಗಟ್ಟಿ' ನಾಟಕವು ಟೀಕಿಸುತ್ತದೆ. ಹೇಗೆ? ವಿವರಿಸಿರಿ.

ಅಥವಾ

'ಟೊಳ್ಳು ಗಟ್ಟಿ' ನಾಟಕವು "ಹೃದಯಂತಿಕೆಯೇ ಜೀವನದ ಪ್ರಮುಖ ಮೌಲ್ಯ" ಎನ್ನುವುದನ್ನು ಸ್ಥಾಪಿಸುತ್ತದೆ. ಹೇಗೆ? ವಿವರಿಸಿರಿ.

II. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ : **(3 × 5 = 15)**

1. ಕೊಡವ ಸಂಸ್ಕೃತಿಯ ಬಗೆಗೆ ಕವಿಯಲ್ಲಿ 'ಅಡಗಿರುವ ನೋವು' ಯಾವುದು? ವಿವರಿಸಿರಿ.

ಅಥವಾ

'ಬದುಕಲು ಬಿಡಿ ಎಂದು ಬೇಡಿಕೊಳ್ಳುವ ಬದಲು ಬದಲಾಗಬೇಕು ಕೋಮಲೆ' ಕವಿತೆಯ ಈ ಸಾಲನ್ನು ವಿಶ್ಲೇಷಿಸಿರಿ.



P.T.O.

2. ಸರಕು ಮತ್ತು ಸೇವೆಗಳ ತೆರಿಗೆ ಎಂದರೇನು? ಇದರಲ್ಲಿ ವಿಧಿಸಲಾಗುವ ತೆರಿಗೆಯ ದರ ಶ್ರೇಣಿಗಳು ಯಾವುವು?

ಅಥವಾ

"ಯಾವುದೇ ವೃತ್ತಿ ಮೊದಲು ನಮಗೆ ಇಷ್ಟವಾಗಬೇಕು. ಒತ್ತಾಯಪೂರ್ವಕ ಸ್ವೀಕರಿಸುವ ಹುದ್ದೆಯಲ್ಲಿ ಆತ್ಮ ತೃಪ್ತಿ ಸಿಗದು" – ಲೇಖಕರ ಈ ಮಾತುಗಳನ್ನು ವಿಶ್ಲೇಷಿಸಿರಿ.

3. ಸುಬ್ಬಾಚಾರ್ – ಗುಂಡೂರಾವ್ ಎಂಬೆರಡು ಪಾತ್ರಗಳ ಮೂಲಕ ಟೊಳ್ಳು-ಗಟ್ಟಿ ನಾಟಕದ ಪೂರ್ವರಂಗದಲ್ಲಿ ವಿಶ್ಲೇಷಣೆಗೊಳ್ಳುವ ವಿಷಯಗಳೇನು? ವಿವರಿಸಿರಿ.

ಅಥವಾ

ಸುಶಿಕ್ಷಿತ ಹೊಸ ತಲೆಮಾರು ಆಧುನೀಕರಣದತ್ತ ವಾಲುವುದನ್ನು ಪಾತುವಿನ ಪಾತ್ರವು ಸಂಕೇತಿಸುತ್ತದೆ. ಹೇಗೆ? ವಿವರಿಸಿರಿ.

III. ಈ ಕೆಳಗಿನವುಗಳಲ್ಲಿ **ಒಂದರ** ಸಂದರ್ಭ ಸೂಚಿಸಿ ಭಾವಾರ್ಥವನ್ನು ವಿವರಿಸಿರಿ : **(1 × 5 = 5)**

1. ಏಳು ಜನ್ಮಾಂತರ ದಿನವು – ಹೀಂಗ
ಹೇಳದೆ ಹೋಗ್ಯಾವೊ ನಿನಗಿಲ್ಲೊ ನೆನಹು
ಭೋಗಲಂಪಟ ಸುಖ ಘನವು – ಭವ
ರೋಗಾದಿ ಮರಣಕ್ಕೆ ಆಯಿತೊ ಅನುವು

2. ಹೂವು ಬಿದ್ದ ಕಣ್ಣಿನವರು
ನಡೆದ ದಾರಿಯಲ್ಲಿ ಹೂವರಳಲಿ
ರಮ್ಜಾನಿನ ಚಂದಿರ ಶಾಂತಿಯ ಬೆಳಕು ಚೆಲ್ಲಲಿ

IV. ಯಾವುದಾದರೂ **ಎರಡು** ಸಾಲುಗಳಿಗೆ ಸಂದರ್ಭ–ಸ್ವಾರಸ್ಯ ವಿವರಿಸಿರಿ : **(2 × 4 = 8)**

1. ಕಿವಿಗೊಟ್ಟು ಕೇಳಿರಣ್ಣ ನೋವಿನ ರಾಗವನ್ನು
2. ಅಸ್ತಿತ್ವವಿಲ್ಲದೆ ಒಂದು ವಸ್ತುವಾದವಳು
3. ಯಾರಿಗೂ ಹೆದರಿಕೆಯಿಲ್ಲ; ಕಾನೂನಿಗೆ ತಡೆಯಿಲ್ಲ.
4. ಕಳ್ಳ ಸುಳ್ಳರಿಗೆಲ್ಲ ವೀರ ಸ್ವರ್ಗವುಂಟೆ.

V. (ಅ) ಯಾವುದಾದರೂ **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ : **(2 × 4 = 8)**

1. ಸುನಂದಾ ಬೆಳಗಾಂವ್‌ಕರ್
2. ಜಿ.ಎಸ್.ಟಿ. ಕೌನ್ಸಿಲ್
3. ರಾಬರ್ಟ್ ಫ್ರಾಸ್ಟ್
4. ಉಡೀಪ್ ಸೋಶಿಯಲ್ ವೆಲ್‌ಫೇರ್ ಸೊಸೈಟಿ

(ಆ) ಯಾವುದಾದರೂ **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ : **(2 × 4 = 8)**

1. ಟಿ.ಪಿ. ಕೈಲಾಸಂ
2. ಪಾತು–ಸಾತು
3. ಮಕ್ಕಳಿ ಸ್ಕೂಲ್ ಮನೇಲಲ್ವೇ
4. ಟೊಳ್ಳು ಗಟ್ಟಿ ನಾಟಕದ ಭಾಷೆ

Shri Dharmasthala Manjunatheshwara
College of Business Management Library
MANGALORE - 575 003

VI. ಒಂದು ವಾಕ್ಯದಲ್ಲಿ ಉತ್ತರಿಸಿರಿ : **(12 × 1 = 12)**

1. ಹರಿದಾಸ ಪಂಥದ ಅಶ್ವಿನಿ ದೇವತೆಗಳೆಂದು ಯಾರನ್ನು ಕರೆಯುತ್ತಾರೆ?
2. ಶಿಶುನಾಳ ಶರೀಫರ ಗುರುವಿನ ಹೆಸರೇನು?
3. ದಹನದ ಕಥೆಯಲ್ಲಿ ಉಲ್ಲೇಖಿಸಲಾದ ದಾಸರಪುರದಲ್ಲಿ ಆಕ್ರಮಣಕ್ಕೊಳಗಾದ ದಲಿತನ ಹೆಸರೇನು?
4. ಪೂಮಾಲೆ – ಇದು ಯಾವ ಭಾಷೆಯಲ್ಲಿ ಪ್ರಕಟವಾಗುವ ಪತ್ರಿಕೆ?
5. 'ಗೂಡು ಬಿಟ್ಟು ಹಾರಿದ ಹಕ್ಕಿ' ಕಥೆಯನ್ನು ಯಾವ ಕಥಾ ಸಂಕಲನದಿಂದ ಆಯ್ದುಕೊಳ್ಳಲಾಗಿದೆ?
6. 'ಈ ಜೀವನ ನಮ್ಮದು' – ಇದು ಯಾರ ಕೃತಿ?
7. ಸರಕು ಮತ್ತು ಸೇವೆಗಳ ತೆರಿಗೆಯು ಯಾವ ದಿನಾಂಕದಿಂದ ಜಾರಿಗೆ ಬಂತು?
8. ಪೂನಂ ಶ್ರೊತಿಗೆ ರಾಷ್ಟ್ರೀಯ ಪ್ರಶಸ್ತಿಯನ್ನು ಪ್ರದಾನ ಮಾಡಿದ ರಾಷ್ಟ್ರಪತಿ ಯಾರು?
9. ಟಿ.ಪಿ. ಕೈಲಾಸಂ ಅವರ ಪೂರ್ಣ ಹೆಸರೇನು?
10. 'ಈ ಭೂಮಿಯಲ್ಲಿ ವಾಸಿಸೋಕೆ ನಾವು ದೇವರಿಗೆ ಕೊಡ್ಬೇಕಾದ ಬಾಡ್ಗೆ ಏನೆಂದರೆ ನಮ್ಮ ಸುತ್ತಾ ಮುತ್ತಲೂ ಇರುವ ಜನರಿಗೆ ಉಪಯೋಗ'' – ಟೊಳ್ಳು ಗಟ್ಟಿ ನಾಟಕದಲ್ಲಿ ಈ ಮಾತನ್ನು ಯಾರು ಹೇಳುತ್ತಾರೆ?
11. ಟೊಳ್ಳು ಗಟ್ಟಿ ನಾಟಕವನ್ನು ಮೊದಲು ಪ್ರಕಟಿಸಿದವರು ಯಾರು?
12. ಹಿರಿಯಣ್ಣಯ್ಯನ ತಂಗಿಯ ಹೆಸರೇನು?